**ದಿನಾಂಕ: 21.03.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ ವಾದಿ ಪರ ಶ್ರೀ.ಡಿ ಎನ್ ಕೆ ವಕೀಲರಿಂದ :**

ವಾದಿ ನನಗೆ ಖಾಸ ಅಕ್ಕನಾಗಬೇಕು. ನನ್ನ ತಂದೆಯ ಹೆಸರು ಗುಲಾಮಖಾನವರು. ನನ್ನ ತಾಯಿಯ ಹೆಸರು ಹಯಾತಬಿ ಆಗಿರುತ್ತದೆ. ನನ್ನ ತಂದೆ ತಾಯಿಯರಿಗೆ ಮೂರು ಜನ ಹೆಣ್ಣು ಮತ್ತು ಮೂರು ಜನ ಗಂಡು ಮಕ್ಕಳು ಇದ್ದೆವೆ. ಅದರಲ್ಲಿ ವಾದಿ ಮೊದಲನೆಯವರು ಆಗಿರುತ್ತಾರೆ. ಅದೇ ರೀತಿ ಜಮಿಲಾಬಿ ಮತ್ತು ಫರೀದಾಬಿ ನನ್ನ ಸಹೋದರಿಯರಾಗಿದ್ದು ಅವರುಗಳು ಮೃತ ಪಟ್ಟಿರುತ್ತಾರೆ. 2 ರಿಂದ 4 ರವರು ನನ್ನ ಖಾಸ ಸಹೋದರರು. ನನ್ನ ತಾಯಿ ಬದುಕಿದ್ದ ಸಂದರ್ಭದಲ್ಲಿ ದಾವಾ ಆಸ್ತಿಗಳು ರೈತಾಪಿ ಮಂಜೂರಗಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ನಿಡಿ–1 ನ್ನು ನನ್ನ ತಾಯಿಯವರು ಮಂಜೂರಾತಿ ಕೋರಿ ಸಲ್ಲಿಸಿರುವ ಬಗ್ಗೆ

ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನೇ ಸಲ್ಲಿಸಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ನಿಡಿ-1 ರಲ್ಲಿಯೂ ಸಹ ಅರ್ಜಿದಾರರ ಕಾಲಂ ನಲ್ಲಿ ನನ್ನ ತಾಯಿಯ ಹೆಸರು ನಮೂದು ಆಗಿದೆ ಎಂರೆ ಸರಿ. ದಾವಾ ಆಸ್ತಿಳ ಮಂಜೂರಾತಿಗಾಗಿ 1981 ರಲ್ಲಿ ನನ್ನ ತಾಯಿ ಅರ್ಜಿಯನ್ನು ಸಲ್ಲಿಸಿದ್ದು ಅದರ ಆಧಾರದ ಮೇಲೆ ಈ ಬಗ್ಗೆ ಎಲ್ ಆರ್ ಎಂ ಎಸ್ ನಂಬರ 137/17 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ತಾಯಿಯವರೇ ದಾವಾ ಆಸ್ತಿಗಳ ಅಧಿಬೋಗದಾರಿಕಾ ಹಕ್ಕನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ 65 ರ ಆಸ್ತಿಗೂ ಸಹ ನನ್ನ ತಾಯಿಯವರೇ ರೈತಾಪಿ ಹಕ್ಕು ಮಂಜೂರಾತಿಗಾಗಿ ಭೂ ನ್ಯಾಯ ಮಂಡಳಿ ಹಾನಗಲ್ ರವರಿಗೆ ಅರ್ಜಿ ಸಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನೇ ಸಲ್ಲಿಸಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ಅದರಂತೆ ಎಲ್ ಆರ್ ಎಂ ಎಸ್ ನಂಬರ 137/17 ರಂತೆ ಪ್ರಕರಣ ದಾಖಲಾಗಿ ನನ್ನ ತಾಯಿಯು ಆಧಿಬೋಗದಾರರು ಎಂದು ಆದೇಶ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ 99 ರ ಆಸ್ತಿಗೂ ಸಹ ರೈತಾಪಿ ಹಕ್ಕು ಮಂಜೂರಾತಿಗಾಗಿ ಕೋರಿ ನನ್ನ ತಾಯಿಯವರು ಹಾನಗಲ್ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನೇ ಸಲ್ಲಿಸಿರುತ್ತೇನೆ ಎಂದು ಸ್ವತಃ ನುಡಿಯತ್ತಾರೆ. ಈ ಬಗ್ಗೆ ಎಲ್ ಆರ್ ಎಂ ಎಸ್ ನಂಬರ 1347/17 ರಂತೆ ಪ್ರಕರಣ ದಾಖಲಾಗಿ ದಿನಾಂಕ 02.11.1997 ರಂದು ನನ್ನ ತಾಯಿಯವರೇ ಆ ಆಸ್ತಿಯ ಆಧಿಬೋಗದಾರರು ಎಂದು ತೀರ್ಮಾನಿಸಿ ಆದೇಶವಾಟಗಿರುತ್ತದೆ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd**/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ